ಸಾಕ್ಷಿಯನ್ನು ದಿನಾಂಕ 19-09-2022 ರಂದು ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ** <u>ಪಾಟೀ ಸವಾಲುಃ</u> **ವಾದಿ** <u>ಪರ ಶ್ರೀ. ಎಂ.ಎಸ್.ಬಿ ವಕೀಲರಿಂದಃ</u>

ದಾವಾ ಆಸ್ತಿಗಳು ಗಬ್ಬೂರಿ ಮತ್ತು ಕೊಟಗುಂದಹುಣಸಿಯಲ್ಲಿವೆ ಆದರೆ ಅದರ ವಿಸ್ತೀರ್ಣ ಎಷ್ಟು ಇದೆ ಎಂದು ಹೇಳಲು ಗೊತ್ತಿಲ್ಲ. ದಾವೆಯಲ್ಲಿ ಎಷ್ಟು ಆಸ್ತಿಗಳು ಇವೆ ಎಂದು ಹೇಳಲು ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಎಷ್ಟು ಮನಗೆಳು ಇವೆ ಎಂದು ಹೇಳಲು ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ಮಾವನ ಹೆಸರಿನಲ್ಲಿರುವ ಆಸ್ತಿಗಳ ಬಗ್ಗೆ ಕೇಸ್ ಹಾಕಿದ್ದೇನೆ. ಈ ಕೇಸ್‌ನ್ನು ನಾನೇ ಹಾಕಿದ್ದೇ ಅಥವಾ ಬೇರೆಯವರು ಹಾಕಿದ್ದೆ ಎಂದು ಕೇಳಿದರೆ ನಾನೇ ಹಾಕಿದ್ದು ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮಲ್ಲಿಕಾರ್ಜುನನ ಮಗ ಹಾಕಿದ್ದಾನೆ. ದಾವಾ ಆಸ್ತಿಗಳೆಲ್ಲವೂ ನನ್ನ ಮಾವನ ತಂದೆಯ ತಂದೆಯಿಂದ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಅವೆಲ್ಲ ಏನೂ ಗೊತ್ತಿಲ್ಲ ನನ್ನ ಮಾವನ ಹೆಸರಿನಲ್ಲಿ ಆ ಆಸ್ತಿಗಳು ಇತ್ತು ಎಂದು ನುಡಿಯುತ್ತೇನೆ. ದಾವಾ ಆಸ್ತಿಗಳ ಬಗ್ಗೆ ಎಷ್ಟು ಕೇಸ್ ಆಗಿದ್ದವು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ಮಾವನಿಗೆ ಗೊತ್ತು. ನನ್ನ ಮಾವನ ಹೆಸರು ಚೆನ್ನಪ್ಪ. ಚೆನ್ನಪ್ಪ ಈಗ ಜೀವಂತವಿಲ್ಲ ಎಂದರೆ ನಿಜ. ಈ ದಾವೆಯಲ್ಲಿ ಹಾಕಿರುವ ತಕರಾರನ್ನು ಸಲ್ಲಿಸುವ ಮೊದಲು ದಾಖಲೆ ಯನ್ನು ಪರಿಶೀಲಿಸಿ ಸಲ್ಲಿಸಿರುವುದೇ ಅಥವಾ ಹಾಗೆಯೇ ಸಲ್ಲಿಸಿದ್ದೇನೆ ಎಂದು ಕೇಳಿದರೆ ನನ್ನ ಮಾವನ ಹೆಸರಿನಲ್ಲಿರುವ ದಾಖಲೆಗಳನ್ನೆಲ್ಲ ತೆಗೆದುಕೊಟ್ಟು ನಂತರ ಸಲ್ಲಿಸಿದ್ದು ಎಂದು ನುಡಿಯುತ್ತೇನೆ. ಏನು ದಾಖಲೆಗಳನ್ನು ಸಲ್ಲಿಸಲಾಗಿದೆ ಎಂದು ಕೇಳಿದರೆ ಹೊಲದ ಕಾಗದಪತ್ರಗಳನ್ನು ಸಲ್ಲಿಸಲಾಗಿದೆ ಎಂದು ನುಡಿಯುತ್ತೇನೆ. ದಾವಾ ಆಸ್ತಿಯ ಕುರಿತು ಉತಾರ ಮಾತ್ರ ನೋಡಿರುವುದೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ.

ನನ್ನ ತಕರಾರಿನ ಖಂಡಿಕೆ ನಂ.7 ರಲ್ಲಿ ಮತ್ತು ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ದರಖಾಸ್ತ ಅರ್ಜಿ 166/1989 ಸಂಬಂಧಿಸಿದಂತೆ ದಾಖಲೆ ನೋಡಿದ್ದೇನೆಯೇ ಎಂದು ಕೇಳಿದರೆ ನೋಡಿಲ್ಲ ಎಂದು ನುಡಿಯುತ್ತೇನೆ. ದರಖಾಸ್ತ ಅರ್ಜಿ 166/1989 ರ ಬಗ್ಗೆ ಬರೆಯಲು ಮಾಹಿತಿಯನ್ನು ನಾನು ವಕೀಲರಿಗೆ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದರಖಾಸ್ತ ಅರ್ಜಿಯಲ್ಲಿ ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಕೇಳಿದರೆ ಹೆಣ್ಣು ಮಕ್ಕಳು ಏನು

ಮಾಡಿದ್ದಾರೆ ಗೊತ್ತಿಲ್ಲ ಎಂದು ನುಡಿಯುತ್ತೇನೆ. ಸದರಿ ಕೇಸಿನಲ್ಲಿ ನಾನು ಪಾರ್ಟಿ ಆಗಿದ್ದೇನೆ ಎಂದು ಕೇಳಿದರೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತೇನೆ. ದಾವಾ ಆಸ್ತಿಗಳ ಬಗ್ಗೆ ಅಥವಾ ಮನೆತನದ ಆಸ್ತಿಗಳ ಬಗ್ಗೆ ಗೊತ್ತಿರುವ ವ್ಯಕ್ತಿ ಯಾರು ಎಂದು ಕೇಳಿದರೆ ನನ್ನ ಮಾವ ಎಂದು ನುಡಿಯುತ್ತೇನೆ. ಅವರನ್ನು ಹೆರತು ಬೇರೆಯಾರಿಗೂ ಗೊತ್ತಿಲ್ಲವೇ ಎಂದು ಕೇಳಿದರೆ ಬೇರೆ ಯಾರಿಗೂ ಗೊತ್ತಿಲ್ಲ ಎಂದು ನುಡಿಯುತ್ತೇನೆ. ಈ ಕೇಸಿನ ಬಗ್ಗೆ ಅವರಿಗೆ ಗೊತ್ತಿರುವುದೇ ಎಂದು ಕೇಳಿದರೆ ಈಗ ಅವರು ಇಲ್ಲವಲ್ಲ ಎಂದು ನುಡಿಯುತ್ತೇನೆ. ನನ್ನ ಮಾವ ಚನ್ನಪ್ಪ ತೀರಿಕೊಂಡಿದ್ದು ಯಾವಾಗ ಎಂದು ಕೇಳಿದರೆ ಅವೆಲ್ಲ ನನ್ನ ತಲೆಯಲ್ಲಿ ನೆನಪಿನಲ್ಲಿ ಉಳಿಯುವುದಿಲ್ಲ ಎಂದು ನುಡಿಯುತ್ತೇನೆ. ನಾನು ಈ ಹಿಂದೆ ದಾಖಲಿಸಿದ ದಾವೆಯಲ್ಲಿ ಮಲ್ಲಿಕಾರ್ಜುನ ಅಥವಾ ಆತನ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ನಿಜ. ಹೊಸೂರರವರ ಮನೆತನದ ಆಸ್ತಿಗಳ ಬಗ್ಗೆ ಅಂತಿಮವಾಗಿ ಯಾವುದೇ ಆದೇಶ ಇದುವರೆಗೆ ಆಗಿಲ್ಲ ಎಂದರೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಅದು ನಡೆಯುತ್ತಿದೆ ಎಂದು ನುಡಿಯುತ್ತೇನೆ. ದರಖಾಸ್ತ ಅರ್ಜಿಯಲ್ಲಿ ರೊಕ್ಕ ಕೊಟ್ಟಿದ್ದಾರೆ ಎನ್ನುವ ಕುರಿತು ಎಷ್ಟು ಕೊಟ್ಟಿದ್ದಾರೆ ಎಂದು ದಾಖಲೆ ಹಾಜರಪಡಿಸಿಲ್ಲ ಎಂದರೆ 5 ಲಕ್ಷ ಕೊಟ್ಟಿದ್ದಾರೆ ಎಂದು ನುಡಿಯುತ್ತೇನೆ. ಆ ರೀತಿ ತೋರಿಸಲು ದಾಖಲೆ ಹಾಜರಪಡಿಸಿಲ್ಲ ಎಂದರೆ ನಿಜ. ಈ ದಾವೆಯಲ್ಲಿರುವ ಅಶೋಕನು ಚನ್ನಪ್ಪನ ಮಗ ಎಂದರೆ ನಿಜ. ಅಶೋಕ ಹಾಗೂ ನಾನು ಪರಸ್ಪರ ಉತ್ತಮ ಬಾಂಧವ್ಯ ಹೊಂದಿದ್ದೇವೆ ಎಂದರೆ ನಿಜ. ನಾನು ಹಾಗೂ ಆತ ಚರ್ಚೆ ಮಾಡಿ ಕೈಫಿಯತ್ತು ಸಲ್ಲಿಸಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು ಹಾಗೂ ಆತ ಕೂಡಿ ಹೊಲವನ್ನು ಉಳುಮೆ ಮಾಡುತ್ತೇವೆ. ಆಸ್ತಿಗಳೆಲ್ಲವೂ ಇನ್ನೂ ಒಟ್ಟಿಗೆ ಇದೆ ಎಂದು ಹೇಳುತ್ತೆನೆಯೇ ಎಂದು ಕೇಳಿದರೆ ಒಟ್ಟಿಗೆ ಇವೆ ಎಂದು ನುಡಿಯುತ್ತೇನೆ. ಅಜ್ಜಾಪುರದಲ್ಲಿರುವ ಹೊಲಗಳು ನನ್ನ ಮಾವ ಹಾಗೂ ಬಸಪ್ಪನ ನಡುವೆ ಹಿಸ್ಸೆಯಾದಾಗ ಬಸಪ್ಪನ ಪಾಲಿಗೆ ಹೋದ ಆಸ್ತಿಗಳು ಎಂದರೆ ಆತನ ಮಕ್ಕಳು ಮೊಮ್ಮಕ್ಕಳೆಲ್ಲ ಹಕ್ಕುಬಿಟ್ಟು ಹೋಗಿದ್ದಾರೆ ಎಂದು ನುಡಿಯುತ್ತೇನೆ. ಮೊಮ್ಮಕ್ಕಳೆಲ್ಲ ಹಕ್ಕುಬಿಟ್ಟು ಹೋಗಿದ್ದಾರೆ ಎಂದು ತೋರಿಸುವಂತಹ ದಾಖಲೆ ಹಾಜರಪಡಿಸಿದ್ದೆನೆಯೇ ಎಂದು ಕೇಳಿದರೆ ಅವೆಲ್ಲ ನನ್ನ ಮಾವನ ಕಡೆ ಇವೆ ಎಂದು

ನುಡಿಯುತ್ತೇನೆ. ನನ್ನ ಮಾವ ಎಂದರೆ ಚನ್ನಪ್ಪ. ಚನ್ನಪ್ಪ ಎಂದರೆ ವೀರಭದ್ರಪ್ಪನ ಮಗ ಎಂದರೆ ನಿಜ. ವೀರಭದ್ರಪ್ಪನ ಮಕ್ಕಳೆಲ್ಲರೂ ಕೂಡಿಯೇ ಇದ್ದೇವೆ ಎಂದರೆ ನಿಜ. ನನ್ನ ಗಂಡನ ಹೆಸರು ಗುರುಸಿದ್ದಪ್ಪ. ನನ್ನ ಮಾವ ತೀರಿಕೊಂಡ ನಂತರವೂ ನಾವೆಲ್ಲರೂ ಒಂದೇ ಮನೆಯಲ್ಲಿ ಇದ್ದೇವೆ ಎಂದು ತೋರಿಸುವಂತಹ ಹಕ್ಕುಬಿಟ್ಟುಕೊಟ್ಟ ಪತ್ರವನ್ನು ಹಾಜರಪಡಿಸಲು ನಮಗೆ ತೊಂದರೆ ಇಲ್ಲ ಎಂದರೆ ಚನ್ನಪ್ಪನ ಮಕ್ಕಳ ಕಡೆಯಿಂದ ಅದನ್ನು ತರಬೇಕಿದೆ ಎಂದು ನುಡಿಯುತ್ತೇನೆ. ಚನ್ನಪ್ಪನ ಮಕ್ಕಳ ಪೈಕಿ ಯಾರ ಕಡೆ ಆ ಕಾಗದ ಇದೆ ಎಂದು ಕೇಳಿದರೆ ಮನೆಯಲ್ಲಿ ಇದೆ ಎಂದು ನುಡಿಯುತ್ತೇನೆ. ಅಂತಹ ಯಾವುದೇ ಕಾಗದ ಇಲ್ಲ ಹಾಗೂ ಆಗಿಲ್ಲ ಎಂದರೆ ಸರಿಯಲ್ಲ. ಬಸಪ್ಪನಿಗೆ ಬಂದಂತಹ ಆಸ್ತಿಗಳಲ್ಲಿ ಮಲ್ಲಿಕಾರ್ಜುನನ ಮಕ್ಕಳಿಗೆ ಪಾಲು ಇದೆ ಎಂದರೆ ಮಲ್ಲಿಕಾರ್ಜುನ ಹಕ್ಕುಬಿಟ್ಟುಕೊಟ್ಟಿದ್ದಾನೆ ಎಂದು ನುಡಿಯುತ್ತೇನೆ. ಮಲ್ಲಿಕಾರ್ಜುನನ ಮಕ್ಕಳಿಗೆ ಹಕ್ಕು ಸಿಗದಂತೆ ಮಾಡಬೇಕೆಂದು ನಾವು, ಚನ್ನಪ್ಪ ಮತ್ತು ಮಲ್ಲಿಕಾರ್ಜುನ ಶಾಮಿಲಾಗಿದ್ದೇವೆ ಎಂದರೆ ಮಲ್ಲಿಕಾರ್ಜುನ, ಆತನ ತಾಯಿ ಯಲ್ಲವ್ವ, ಶಾಂತವ್ವ, ಪಾರವ್ವ, ಬಸವ್ವ ಎಲ್ಲರೂ ಸೇರಿ ಹಕ್ಕುಬಿಟ್ಟ ಪತ್ರ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತೇನೆ. ಬಸವರಾಜ ಮತ್ತು ಸುನೀಲ ರವರಿಗೆ ಆಸ್ತಿಗಳನ್ನು ಕೊಡದಂತೆ ಮಾಡಬೇಕೆಂದು ದಾಖಲೆಗಳನ್ನು ಸೃಷ್ಟಿ ಮಾಡುವ ಪ್ರವೃತ್ತಿಯನ್ನು ನಾವು ಹೊಂದಿದ್ದೇವೆ ಎಂದರೆ ಸರಿಯಲ್ಲ. ಮಲ್ಲಿಕಾರ್ಜುನನಿಗೆ ನಾವು ಯಾವುದೇ ರೊಕ್ಕ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮಲ್ಲಿಕಾರ್ಜುನನ ಮಕ್ಕಳಿಗೆ ನಾವು ಯಾವುದೇ ರೊಕ್ಕ ಕೊಟ್ಟಿಲ್ಲ ಎಂದರೆ ತೆಗೆದುಕೊಂಡು ಹೋಗಿದ್ದಾರೆ ಎಂದು ನುಡಿಯುತ್ತೇನೆ. ದಾವಾ ಆಸ್ತಿಗಳೆಲ್ಲವು ಕೋಟಿ ಕೋಟಿ ಬೆಲೆಬಾಳುವ ಆಸ್ತಿಗಳು ಎಂದರೆ ನನ್ನ ಮಾವನೇ ಎಲ್ಲವನ್ನು ಮಾಡಿದ್ದು ಹಾಗೂ ಹೆಣ್ಣು ಮಕ್ಕಳು ಏನು ಮಾಡಿಲ್ಲ ಎಂದು ನುಡಿಯುತ್ತೇನೆ. ನೂರಾರು ಕೋಟಿ ಬೆಲೆಬಾಳುವ ಆಸ್ತಿ ಇರುವುದರಿಂದ ನಾನು ಹಾಗೂ ಮಲ್ಲಿಕಾರ್ಜುನ ಶಾಮಿಲಾಗಿ ಸುಳ್ಳು ಹೇಳುತ್ತಿರುವುದು ಎಂದರೆ ತಂದೆ ತಾಯಿ ಕೊಟ್ಟು ಹೋದ ನಂತರ ಮಕ್ಕಳು ನಾವೇನೂ ಮಾಡಲು ಆಗುವುದಿಲ್ಲ ಎಂದು ನುಡಿಯುತ್ತೇನೆ. ದಾವಾ ಸ್ವತ್ತುಗಳನ್ನು ವಾದಿಯರು ಇನ್ನೂ ಕೂಡ ಸಾಗುವಳಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಎಲ್ಲವನ್ನು ನಾವೇ ಸಾಗುವಳಿ ಮಾಡುತ್ತಿರುವುದು ಎಂದು ನುಡಿಯುತ್ತೇನೆ. ಭೂಸ್ವಾಧೀನ ಕುರಿತಾದ ಪರಿಹಾರ ಪಡೆದುಕೊಳ್ಳಲು ನಮಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ನ್ಯಾಯಾಲಯದ ಆದೇಶದ ಪ್ರಕಾರವೇ ಅದನ್ನು

ಪಡೆದುಕೊಂಡಿದ್ದೇವೆ ಎಂದು ನುಡಿಯುತ್ತೇನೆ. ನಾನು ಹಾಗೂ ಚೆನ್ನಪ್ಪ ಮಿಲಾಪೆಯಾಗಿ ಆ ರೀತಿ ಮಾಡಿಕೊಂಡ ಕೇಸ್‌ಗಳು ಎಂದರೆ ಸರಿಯಲ್ಲ. ವಾದಿಯವರ ಹಕ್ಕು ನಷ್ಟ ಮಾಡಬೇಕೆಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ.

**ಪಾಟಿ ಸವಾಲುಃ 2 ನೇ ವಾದಿ ಪರ ಶ್ರೀ ಜೆ ಟಿ ಎಂ** ವಕೀಲರು **ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.**

**ಪಾಟಿ ಸವಾಲುಃ ಇತರೆ ಪ್ರತಿವಾದಿಗಳ ಪರ ಯಾವುದೇ ಕೋರಿಕೆ ಇಲ್ಲ ಕಾರಣ ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.